


## ನಕ್ಕು ಬಿಡು

ಕೋರ್ಟಿನಲ್ಲಿ...
ಜಡ್ಜ್: ಸತ್ತವನ ಪರಿಚಯ ನಿನಗಿತ್ತೆ?
ಅಪರಾಧಿ: ಹೌದು ಮಹಾ ಸ್ವಾಮಿ!
ಜಡ್ಜ್: ಆತ ಸಾಯುವುದಕ್ಕೆ ಮೊದಲೋ ಅಥವಾ ಆ ಮೇಲೋ?

★★★

'ಒಬ್ಬ ಡಾಕ್ಟರ್' ಮತ್ತು 'ಒಬ್ಬ ಲಾಯರ್' ತಮ್ಮ ತಮ್ಮ ಕಾರುಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ಮಂಜು ಮುಸುಕಿದ ಹೆದ್ದಾರಿಯಲ್ಲಿ, ವೇಗವಾಗಿ ಡ್ರೈವ್ ಮಾಡುತ್ತಿದ್ದರು. ಹಾಗೆ ಹೋಗುತ್ತಿರುವಾಗ ಎರಡೂ ಕಾರು ಪರಸ್ಪರ ಡಿಕ್ಕಿ ಹೊಡೆದು, ಇಬ್ಬರಿಗೂ ಅಲ್ಪ ಸ್ವಲ್ಪ ಗಾಯವಾಗಿ ತಮ್ಮ ತಮ್ಮ ಕಾರುಗಳಿಂದ ಹೊರಬಂದು ನಿಂತರು. ತಪ್ಪು ಯಾರದ್ದು ಎಂದು ನಿರ್ಧರಿಸಲು ಆಗುವಂತಿರಲಿಲ್ಲ. ಆಗ ಲಾಯರ್ ತನ್ನ ಕಾರಿನೊಳಕ್ಕೆ ಕೈ ತೂರಿಸಿ ಬ್ರಾಂದಿ ಶೀಷೆಯೊಂದನ್ನು ಹೊರ ತೆಗೆದು ಅದರ ಕ್ಯಾಪ್ ತೆಗೆದು, ಡಾಕ್ಟರ್‌ಗೆ ಆಫರ್ ಮಾಡುತ್ತಾ 'ತುಂಬಾ ಹೆದರಿದ್ದೀರಿ; ಚಳಿ ಬೇರೆ, ಕುಡಿಯಿರಿ ಧೈರ್ಯ ಬರುತ್ತೆ' ಎಂದು ಹೇಳುತ್ತ ಕೊಟ್ಟ.



ಡಾಕ್ಟರ್ ತುಂಬು ಕೃತಜ್ಞತೆಯಿಂದ ಆ ಬ್ರಾಂದಿ ಶೀಷೆಯನ್ನು ತೆಗೆದುಕೊಂಡು ಸುಮಾರು ಅರ್ಧದಷ್ಟು ಖಾಲಿ ಮಾಡಿ ಅದನ್ನು ಲಾಯರ್‌ಗೆ ಹಿಂದಿರುಗಿಸುತ್ತಾ 'ನೀವೂ ಕುಡಿಯಿರಿ' ಎಂದು ಹೇಳಿದ.

'ನಾನೂ ಕುಡೀತೀನಿ; ಆದರೆ ಅದಕ್ಕೆ ಮೊದಲು ಟ್ರಾಫಿಕ್ ಪೋಲಿಸ್ ಬಂದು ಸ್ಥಳ ಪರೀಕ್ಷೆ ಮಾಡಿ ಹೋಗಲಿ' ಎಂದು ಆ ಬ್ರಾಂದಿ ಶೀಷೆಯನ್ನು ತೆಗೆದುಕೊಳ್ಳದೆ, ಮೊಬೈಲ್ ಸ್ಕ್ವಾಡ್ ಟ್ರಾಫಿಕ್ ಪೊಲೀಸ್‌ಗೆ ಫೋನ್ ಮಾಡಿದ!

ಸಂಗ್ರಹ: ಎಸ್. ವಿಶ್ವನಾಥ ಮಂಡ್ಯ

'ದೇಶದಲ್ಲಿಯೇ ಅತ್ಯುತ್ತಮ ದರ್ಜೆಯ ರಕ್ಷಣೆ ಬೇಕೆಂದು ಸಚಿವರು ಹಠ ಹಿಡಿದಿದ್ದರು ಅದಕ್ಕೆ...!'
'ಅದಕ್ಕೆ?'
'ಅದಕ್ಕೆ ಅವರನ್ನು ಜೈಲಿನಲ್ಲಿ ಇಟ್ಟಿದ್ದೇವೆ...!'

★★★

ಜಡ್ಜ್: 'ನಿನ್ನ ಮೇಲಿರುವ ಅಪಾದನೆ ಏನು?'
ಕಳ್ಳ: 'ಹೊಸ ವರ್ಷದ ಸಲುವಾಗಿ ಶಾಪಿಂಗ್ ಮಾಡುತ್ತಿದ್ದೆ. ಆದ್ರೆ ಸ್ವಲ್ಪ ಬೇಗನೆ ಮಾಡಲು ಹೋಗಿದ್ದೆ ಮಹಾಸ್ವಾಮಿ...!'
ಜಡ್ಜ್: 'ಶಾಪಿಂಗ್ ಮಾಡುವುದು ಅಪರಾಧವಲ್ಲ...! ಆದ್ರೆ ಬೇಗನೆ ಅಂದ್ರೆ ಎಷ್ಟು ಬೇಗನೆ ಹೋಗಿದ್ದೆ...?'
ಕಳ್ಳ: 'ಶಾಪಿಂಗ್ ಮಾಲ್'ನ ಬಾಗಿಲು ತೆರೆಯುವ ಮೊದಲೇ, ಶಟರ್ ಮುರಿದು ಶಾಪಿಂಗ್ ಮಾಡುತ್ತಿದ್ದೆ ಮಹಾಸ್ವಾಮಿ...!'



ಸಂಗ್ರಹ: ವಿಜಯಕುಮಾರ ಜೆ. ಹರಪನಹಳ್ಳಿ